ಕರ್ನಾಟಕ ಸರ್ಕಾರ

(ತಾಂತ್ರಿಕ ಶಿಕ್ಷಣ ಇಲಾಖೆ)

ಸಂಖ್ಯೆ: ತಾಂ.ಶಿ.ಇ 03 ಸಿಡಿಸಿ(1) 2019-20

ನಿರ್ದೇಶಕರವರ ಕಛೇರಿ,
ಅರಮನೆ ರಸ್ತೆ, ಬೆಂಗಳೂರು-1,
ದಿನಾಂಕ: 04/03/2020.

**ಜ್ಞಾಪನ**

ರಾಜ್ಯದ ಪಾಲಿಟೆಕ್ನಿಕ್ ಡಿಪ್ಲೊಮಾ ಪಠ್ಯಕ್ರಮಗಳನ್ನು ಎಐಸಿಟಿಇ ಮಾದರಿ ಡಿಪ್ಲೊಮಾ ಪಠ್ಯಕ್ರಮಗಳನ್ವಯ ಪರಿಷ್ಕರಿಸಲು ಈಗಾಗಲೇ ಕ್ರಮ ವಹಿಸಲಾಗಿದ್ದು, ಪ್ರಥಮ ವರ್ಷದ ಇಂಜಿನಿಯರಿಂಗ್ ಡಿಪ್ಲೊಮಾ ಪ್ರೋಗ್ರಾಂಗಳಿಗೆ ಏಕರೂಪ ಪಠ್ಯಕ್ರಮಗಳನ್ನು ಅಳವಡಿಸಬೇಕಾಗಿದ್ದು, ಎಲ್ಲಾ ಇಂಜಿನಿಯರಿಂಗ್ ಡಿಪ್ಲೊಮಾ ಪ್ರೋಗ್ರಾಂಗಳ ಪ್ರಥಮ ವರ್ಷದ ಪಠ್ಯಕ್ರಮಗಳಲ್ಲಿ ಅಪ್ಲೈಡ್ ಕೆಮಿಸ್ಟ್ರಿ ಥಿಯರಿ ಹಾಗು ಪ್ರಯೋಗಾಲಯ ಕೋರ್ಸುಗಳಿರುತ್ತವೆ. ಸದರಿ ಅಪ್ಲೈಡ್ ಕೆಮಿಸ್ಟ್ರಿ ಥಿಯರಿ ಹಾಗು ಪ್ರಯೋಗಾಲಯ ಪಠ್ಯಕ್ರಮಗಳನ್ನು ವಿದ್ಯಾರ್ಥಿಗಳಿಗೆ ಗುಣಾತ್ಮಕವಾಗಿ ಬೋಧಿಸಲು ಹಾಗು ಕಲಿಕಾ ವಿಷಯಗಳ ಬಗ್ಗೆ ಹೆಚ್ಚಿನ ಅರಿವು ಮೂಡಿಸಲು ರಾಜ್ಯದ ಸರ್ಕಾರಿ ಹಾಗು ಅನುದಾನಿತ ಪಾಲಿಟೆಕ್ನಿಕ್‌ಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ವಿಜ್ಞಾನ ಉಪನ್ಯಾಸಕರಿಗೆ ಎರಡು ವಾರ ಅವಧಿಯ "Concepts of Applied Chemistry for Diploma studies" ಅಲ್ಪಾವಧಿ ತರಬೇತಿಯನ್ನು NITTTR ವಿಸ್ತರಣಾ ಕೇಂದ್ರ ಬೆಂಗಳೂರು ಇಲ್ಲಿ ಕೆಳಗೆ ನಮೂದಿಸಿದ ದಿನಾಂಕಗಳಂದು ಆಯೋಜಿಸಲಾಗಿದೆ.

| Sl.No | Training batches | Training Duration |
|---|---|---|
| 1 | Batch I | 20/04/2020 To 30/04/2020 |
| 2 | Batch II | 04/05/2020 To 15/05/2020 |
| 3 | Batch III | 18/05/2020 To 29/05/2020 |
| 4 | Batch IV | 01/06/2020 To 12/06/2020 |
| 5 | Batch V | 15/06/2020 To 26/06/2020 |
| 6 | Batch VI | 29/06/2020 To 10/07/2020 |

ಮೇಲ್ಕಂಡ ವಿಷಯವಾಗಿ ಸರ್ಕಾರಿ ಹಾಗು ಅನುದಾನಿತ ಪಾಲಿಟೆಕ್ನಿಕ್ ಸಂಸ್ಥೆಗಳ ಪ್ರಾಚಾರ್ಯರು ತಮ್ಮ ತಮ್ಮ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ವಿಜ್ಞಾನ ಉಪನ್ಯಾಸಕರೊಡನೆ ಚರ್ಚಿಸಿ, ಪ್ರತಿ ಪಾಲಿಟೆಕ್ನಿಕ್‌ನಿಂದ ಒಬ್ಬ ವಿಜ್ಞಾನ ಉಪನ್ಯಾಸಕರನ್ನು ಮೇಲ್ಕಂಡ ಯಾವುದಾದರೂ ಒಂದು ತರಬೇತಿಗೆ ನಿಯೋಜಿಸಬೇಕಾಗಿರುತ್ತದೆ. ನಿಯೋಜಿತ ವಿಜ್ಞಾನ ಉಪನ್ಯಾಸಕರ ವಿವರಗಳನ್ನು ಈ ಕೆಳಕಂಡ ಗೂಗಲ್ ಫಾರ್ಮ್ ಲಿಂಕ್‌ನಲ್ಲಿ 20/03/2020ರ ಒಳಗೆ ಸಲ್ಲಿಸಲು ಸೂಚಿಸಿದೆ

https://forms.gle/8QvA9PH3Ry69sMz98

ಜಂಟಿ ನಿರ್ದೇಶಕರು (ಸಿಡಿಸಿ)

ಗೆ:

ಪ್ರಾಚಾರ್ಯರು,
ರಾಜ್ಯದ ಎಲ್ಲಾ ಸರ್ಕಾರಿ ಮತ್ತು ಅನುದಾನಿತ ಪಾಲಿಟೆಕ್ನಿಕ್‌ಗಳು- ಸೂಕ್ತ ಕ್ರಮಕ್ಕಾಗಿ.

ರವಾನಿಸಲಾಗಿದೆ
ಸಂ: 2A06
ದಿ: 5/3/2020

Scanned with CamScanner